ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ ೨೬ನೇ ಫೆಬ್ರುವರಿ ೧೯೯೨ ಮಂಗಳವಾರ ೭ ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ (ಬೆಳಿಗ್ಗೆ) ೧೧.೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷ (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ಹುಲಗೂರು ಗ್ರಾಮದಲ್ಲಿ ಸರ್ಕಾರಿ ಬಸ್ ನಿಲ್ದಾಣದ ನಿರ್ಮಾಣ

107 - ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ (ಕುಂದಗೋಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಹುಲಗೂರು ಗ್ರಾಮದಲ್ಲಿ ಸರಕಾರ ಬಸ್ ನಿಲ್ದಾಣ ನಿರ್ಮಿಸಲು ತೀರ್ಮಾನ ಮಾಡಿಥೆಯೇ?

ಆ) ಹಾಗಿದ್ದಲ್ಲಿ ಯಾವಾಗ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಹೌದು.

ಆ) ಶೀಘ್ರದಲ್ಲಿಯೇ ಕೆಲಸವನ್ನು ಪ್ರಾರಂಭಿಸಲಾಗುವುದು.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ : ಮಾನ್ಯ ಅಧ್ಯಕ್ಷರೆ ಶಿಗ್ಗಾಂವ್ ತಾಲ್ಲೂಕು ಹುಲಗೂರು ಗ್ರಾಮದ ಬಸ್ ನಿಲ್ದಾಣದ ಕೆಲಸ ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದಾರೆ ಇದು ಬಹಳ ದಿವಸದಿಂದ ಪೆಂಡಿಂಗ್ ಇರತಕ್ಕ ಕೆಲಸ. ಕೂಡಲೇ ಸರ್ಕಾರ ಇದನ್ನು ತೆಗೆದುಕೊಂಡು ಕೆಲಸವನ್ನು ಪ್ರಾರಂಭ ಮಾಡುತ್ತದೆಯೇ ಎಂದು ಮಾನ್ಯ ಸಾರಿಗೆ ಸಚಿವರನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಠ್ : ಮಾನ್ಯ ಸದಸ್ಯರು ತಮ್ಮ ಕ್ಷೇತ್ರಕ್ಕೆ ಹೋಗಿಲ್ಲ ಎಂದು ಕಾಣುತ್ತದೆ. 20.2.91ನೇ ತಾರೀಖಿನಂದು ಕೆಲಸ ಪ್ರಾರಂಭ ಆಗಿದೆ.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ : ನಾನು ನನ್ನ ಕ್ಷೇತ್ರದಲ್ಲಿಯೇ ಇರುತ್ತೇನೆ. ಮಾನ್ಯ ಸಾರಿಗೆ ಸಚಿವರು ಬರುವುದು ಅಲ್ಲಿಗೆ ಕಡಿಮೆ. ಅವರಿಗೆ ವಯಸ್ಸಾಗಿದೆ.

ಅಧ್ಯಕ್ಷರು : ಯಾರು ಹೇಳುತ್ತಾರೆ ಅವರಿಗೆ ವಯಸ್ಸಾಗಿದೆ ಎಂದು. I take strong objection to that.

SRI AZEEZ SAIT : Sir, I have been travelling much more than anybody else.

MR SPEAKER : Not only that. You have also been travelling very fast.

SRI AZEEZ SAIT : The Hon. Member has not gone to his constituency. Probably he has not seen.

MR SPEAKER : On record the work has started

ನೀವು ನಿಮ್ಮ ಕಾನ್‌ಸ್ಟಿಟ್ಯುಯೆನ್ಸಿಗೆ ಹೋಗಿ ರಿಪೋರ್ಟ್ ಕೊಡಿ.

ಬಳ್ಳೊಳ್ಳಿ ಕ್ಷೇತ್ರದಲ್ಲಿ ಕೆ.ಇ.ಬಿ.ಯಿಂದ ಕಡಿಮೆ ವಿದ್ಯುತ್ ಪೂರೈಕೆ

203 - ಐನಾಪುರ ಮನೋಹರ ಉಮಾಕಾಂತ್ (ಬಳ್ಳೊಳ್ಳಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಕ್ಷೇತ್ರದ ಸಾವಿರಾರು ನೀರಾವರಿ ಪಂಪ್ ಸೆಟ್ಟುಗಳು ಕಡಿಮೆ ವಿದ್ಯುತ್ ಒತ್ತಡದಿಂದ (ಓಲ್ಟೇಜ್) ಸುಟ್ಟಿರುವುದು ವಾಸ್ತವ ಸಂಗತಿಯೇ?

ಆ) ಹಾಗಾಗಿದ್ದಲ್ಲಿ ಇಂಡಿ ತಾಲ್ಲೂಕಿಗೆ ಸರಿಯಾಗಿ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಕ್ಷೇತ್ರದಲ್ಲಿ ಸಾವಿರಾರು ನೀರಾವರಿ ಪಂಪುಸೆಟ್ಟುಗಳು ಸುಟ್ಟಿರುವ ಬಗ್ಗೆ ಯಾವುದೇ ನಿರ್ದಿಷ್ಟ ಪ್ರಕರಣಗಳು ಗಮನಕ್ಕೆ ಬಂದಿಲ್ಲ.

ಆ) ಮೇಲಿನ (ಅ)ಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ ಆದರೂ ವಿದ್ಯುಚ್ಛಕ್ತಿ ಪರಿಸ್ಥಿತಿಯನ್ನು ಉತ್ತಮಪಡಿಸಲು ಕೆಲವಾರು ಹೈವೋಲ್ಟೇಜ್ ಮಾರ್ಗಗಳನ್ನು ಮತ್ತು ವಿದ್ಯುತ್ ಸ್ವೀಕರಣಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

ಶ್ರೀ ಐನಾಪುರ ಮನೋಹರ ಉಮಾಕಾಂತ್ : ಮಾನ್ಯ ಅಧ್ಯಕ್ಷರೆ ವಿದ್ಯುತ್ ಪೂರೈಕೆ ಬಗ್ಗೆ ಇಡೀ ಇಂಡಿ ತಾಲ್ಲೂಕಿನ ಬಳ್ಳೊಳಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಈ ಸದನದಲ್ಲಿ ನಾನು ಮೂರನೆಯ ಸಾರಿ ಪ್ರಸ್ತಾಪ ಮಾಡುತ್ತಿದ್ದೇನೆ. ಇದು ಬಿಜಾಪುರ ಜಿಲ್ಲೆಯ ಕ್ಷೇತ್ರಕ್ಕೆ ಸೇರಿದ್ದು ಬೆಳಗಾಂ ಜಿಲ್ಲೆಗೆ ಸಮೀಪದಲ್ಲಿ ಈ ಕ್ಷೇತ್ರ ಮಹಾರಾಷ್ಟ್ರ ಗಡಿ ಮತ್ತು ಕರ್ನಾಟಕದ ಕಟ್ಟಕಡೆಯಲ್ಲಿ ಇದೆ. ಆದ್ದರಿಂದ ಸರ್ಕಾರದ ಯಾವೊದೇ ಸವಲತ್ತುಗಳು ಸಹ ಸರಿಯಾಗಿ ಇಲ್ಲದೆ ಲಭ್ಯ ಆಗುತ್ತಾ ಇಲ್ಲ. ಈ ವರ್ಷವೇ ಅಲ್ಲ ಹಿಂದಿನ ವರ್ಷವೇ ಆಗಲೇ ಸ್ವಾತಂತ್ರ್ಯ ಸಿಕ್ಕಾಗಿನಿಂದಲೂ ಸರ್ಕಾರದ ಯಾವುದೇ ಸವಲತ್ತುಗಳು ನಮ್ಮ ಕ್ಷೇತ್ರಕ್ಕೆ ಲಭ್ಯ ಆಗುತ್ತಾ ಇಲ್ಲ.

ಶ್ರೀ ಐನಾಪುರ ಮನೋಹರ್ ಉಮಾಕಾಂತ್ : ಇಡೀ ರಾಜ್ಯದಲ್ಲಿ ಇಂಡಿ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಪಂಪ್‌ಸೆಟ್ಟುಗಳು ಇವೆ. ಅಲ್ಲಿನ ರೈತರು ಸುಮಾರು 18 ಸಾವಿರ ಪಂಪ್‌ಸೆಟ್ಟುಗಳನ್ನು ಪಡೆದಿದ್ದಾರೆ. ಕೆರೆ, ಭಾವಿ, ನದಿ, ಹಾಗೂ ಬೋರ್‌ವೆಲ್‌ಗಳ ಮೂಲಕ ತಮ್ಮ ಭೂಮಿಗೆ ನೀರಾವರಿ ಸೌಲಭ್ಯವನ್ನು ಹೊಂದಿದ್ದಾರೆ. ಈ 18 ಸಾವಿರ ಪಂಪ್‌ಸೆಟ್ಟುಗಳಿಂದ ಸುಮಾರು 30 ಸಾವಿರ ಎಕರೆ ಕಬ್ಬನ್ನು ಮತ್ತು 10 ಸಾವಿರ ಎಕರೆ ಹಣ್ಣುಹಂಪಲುಗಳನ್ನು ಬೆಳೆದು ತಮ್ಮ ಜೀವನ ಸಾಗಿಸುತ್ತಾ ಇದ್ದಾರೆ. ಆದರೂ ಇತ್ತೀಚೆಗೆ ವಿದ್ಯುತ್‌ಚ್ಛಕ್ತಿ ಪೂರೈಕೆಯಲ್ಲಿ